# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 715/2023

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಚೈತ್ರ | ಸಿಡಬ್ಲ್ಯೂ–2 |
| ತಂದೆಯ/ಗಂಡನ ಹೆಸರು | – | ಕರೇಪಾತಪ್ಪ | ಪಿಡಬ್ಲ್ಯೂ–2 |
| ವಯಸ್ಸು | – | ಸು. 40 ವರ್ಷ | ಪ್ರ.ವ.ಬೋ ದಿನಾಂಕ:24.10.2024 |
| ಉದ್ಯೋಗ | – | ವ್ಯವಸಾಯ | |
| ವಾಸ | – | ಶಿವಗಂಗಾ ಗ್ರಾಮ | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:–**

ಚಾಸಾ–1 ನನ್ನ ಮಾವ. ಚಾಸಾ–3 ರಿಂದ 8 ರವರು ನನ್ನ ಸಂಬಂಧಿಕರು. ಆರೋಪಿತರೆಲ್ಲರೂ ನಮ್ಮ ಸಂಬಂಧಿಕರು.

ದಿ:11.02.2023 ರಂದು ರಾತ್ರಿ 8.30 ರ ಸಮಯದಲ್ಲಿ ನಾನು ಮತ್ತು ಚಾಸಾ–1 ಹಾಗೂ 3 ಮತ್ತು 4 ರವರು ನಮ್ಮ ಮನೆಯ ಹತ್ತಿರ ಇರುವಾಗ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದರು. 1 ನೇ ಆರೋಪಿ ಚಾಸಾ–1 ರವರಿಗೆ ಹಾರೆಕೋಲಿನಿಂದ ತಲೆಗೆ ಹೊಡೆದನು. 3 ನೇ ಆರೋಪಿತನು ನನಗೆ ಸೀರೆ ಹಿಡಿದು ಎಳೆದಾಡಿ, ಕೈ ಕಾಲುಗಳಿಂದ ಹೊಡೆದನು. ಉಳಿದ ಎಲ್ಲಾ ಆರೋಪಿತರು ಕೈ ಕಾಲುಗಳಿಂದ ಕೆಳಗೆ ಹಾಕಿ ತುಳಿದರು. ಚಾಸಾ–5 ಮತ್ತು 6 ರವರು ಜಗಳವನ್ನು ಬಿಡಿಸಿದರು. ನಂತರ ಗಾಯಗೊಂಡ ನಾವೆಲ್ಲರೂ ಹಿರಿಯೂರು ಆಸ್ಪತ್ರೆಗೆ ಬಂದೆವು ಪ್ರಥಮ ಚಿಕಿತ್ಸೆ ಪಡೆದು ನಂತರ ನಾವೆಲ್ಲಾ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ಹೋದೆವು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. **(8 ನೇ ಆರೋಪಿ ನ್ಯಾಯಲಯದಲ್ಲಿ ಗೈರು ಹಾಜರಿದ್ದು, ಆರೋಪಿತನನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು**

**ಇರುವುದಿಲ್ಲ ಎಂದು ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ).** ಸಾಕ್ಷಿಯು ಅಮಾನತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಅಬ್ಬಿನಹೊಳೆಯಲ್ಲಿ ಸಹಿ ಮಾಡಿರುತ್ತೇನೆ. ಕ್ಷಿಯು ನ್ಯಾಯಾಲಯದ ಮುಂದೆ ಇರುವ ನೀಲಿ ಬಣ್ಣದ ಸೀರೆ ಹಾಗೂ ಕಂದು ಬಣ್ಣದ ಜಾಕೀಟನ್ನು ಅಬ್ಬಿನಹೊಳೆಯಲ್ಲಿ ಪೋಲಿಸರಿಗೆ ನೀಡಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ನೀಲಿ ಬಣ್ಣದ ಸೀರೆ ಹಾಗೂ ಕಂದು ಬಣ್ಣದ ಜಾಕೀಟನ್ನು **ಮು.ಮಾ-1 ಮತ್ತು 2** ಎಂದು ಗುರುತಿಸಲಾಯಿತು. ಪೋಲಿಸರು ನಮ್ಮ ಮನೆಗೆ ಬಂದಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಹಾರೇಕೋಲನ್ನು ನೋಡಿ ಗುರುತಿಸುತ್ತಾರೆ. ಈ ವಿಚಾರವಾಗಿ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ. ಸಾಕ್ಷಿಯು ನೋಡಿ ಗುರುತಿಸಿದ ಕಲಂ.164(5)ಸಿ.ಆರ್.ಪಿ ಸಿ ಹೇಳಿಕೆಯನ್ನು **ನಿಪಿ-3** ಎಂದು ಅದರಲ್ಲಿನ ಸಾಕ್ಷಿಯ ಸಹಿಗಳನ್ನು **ನಿಪಿ-3(ಎ) ರಿಂದ (ಸಿ)** ಎಂದು ಗುರುತಿಸಲಾಯಿತು. **(ಸದರಿ ಕಲಂ.164(5)ಸಿ ಆರ್. ಪಿ ಸಿ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಲಕೋಟೆಯಿಂದ ತೆಗೆಯಲಾಯಿತು.)**

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ-ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ-ಸವಾಲುಃ ಮಾನ್ಯ ಎಪಿಪಿಯವರಿಂದಃ-**

1ನೇ ಆರೋಪಿ ನನ್ನ ಸೀರೆ ಹಿಡಿದು ಎಳೆದಾಡಿ ನನ್ನ ಮಾನಕ್ಕೆ ಚ್ಯುತಿ ಬರುವಂತೆ ನಡೆದುಕೊಂಡಿರುತ್ತಾರೆ ಎಂದರೆ ಸರಿ. ಆರೋಪಿತರು ಗುಂಪುಕಟ್ಟಿಕೊಂಡು ಬಂದು ನಮಗೆ ಸೂಳೇಮಕ್ಕಳಾ, ಬೋಳೀಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ. ದಿಃ14.02.2023 ರಂದು ಅಬ್ಬಿನಹೊಳೆ ಪೋಲಿಸ್

ಠಾಣೆಗೆ ಚಾಸಾ-9 ಮತ್ತು 10 ರವರು ಬಂದಿದ್ದರು ಎಂದರೆ ಸರಿ. ನಿಪಿ-2 ರಂತೆ ನನ್ನ ಸಮಕ್ಷಮ ಪಂಚನಾಮೆಯನ್ನು ಸಂಜೆ 4.30 ರಿಂದ 5.00 ಗಂಟೆಯವರೆಗೆ ಜರುಗಿಸಿ ನಾನು ಹಾಜರು ಪಡಿಸಿದ ಮು.ಮಾ-1 ಮತ್ತು 2 ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ.

**ಪಾಟೀ-ಸವಾಲುಃ ಆರೋಪಿ ಪರ ಶ್ರೀ.ವೈ ಆರ್ ಕೆ ವಕೀಲರಿಂದಃ**

ಚಾಸಾ-1 ನನ್ನ ಮಾವ. ಚಾಸಾ-3 ನನ್ನ ತಾಯಿ. ಚಾಸಾ-3 ರವರು ನಾಗಪ್ಪನಹಟ್ಟಿಯಲ್ಲಿ ವಾಸವಿದ್ದಾರೆ. ಚಾಸಾ-4 ನನ್ನ ಪತಿ. ಚಾಸಾ-5 ನನ್ನ ದೊಡ್ಡ ಮಾವ ಮತ್ತು ಚಾಸಾ- 6 ನನ್ನ ಮೈದುನ. ಚಾಸಾ-7 ನನ್ನ ಅಕ್ಕ. ಚಾಸಾ-8 ನನ್ನ ಸಂಬಂಧಿ. ಆರೋಪಿತರೆಲ್ಲರೂ ನನ್ನ ಸಂಬಂಧಿಕರು.

ಗಲಾಟೆ ನಡೆಯುವಾಗ ಸುಮಾರು ರಾತ್ರಿ 8.30 ಸಮಯ ಆಗಿತ್ತು. ಆಗ ಸಮಯದಲ್ಲಿ ನಾವು ನಮ್ಮ ಮನೆಯಲ್ಲಿ 7 ಜನ ಇದ್ದೆವು. 1 ನೇ ಆರೋಪಿಯ ಮನೆ ನನ್ನ ಮನೆಯ ಪಶ್ಚಿಮ ದಿಕ್ಕಿಗೆ ಬರುತ್ತದೆ. ನನ್ನ ಹಾಗೂ 1 ಆರೋಪಿಯ ಮನೆ ನಡುವೆ ಸಾರ್ವಜನಿಕ ರಸ್ತೆ ಇದೆ ಎಂದರೆ ಸರಿ. 1 ಆರೋಪಿ ಮತ್ತು ನನ್ನ ಮನೆಯ ಮಧ್ಯೆ 6-7 ಅಡಿ ಖಾಲಿ ಜಾಗ ಇದೆ ಎಂದರೆ ಸರಿ. ಈ ವಿಚಾರವಾಗಿ ಆರೋಪಿತರು ಹಾಗೂ ನಮ್ಮ ನಡುವೆ ಆಗಾಗ ಜಗಳ ನಡೆಯುತ್ತದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ವೈ ಮನಸ್ಸು ಇದೆ ಎಂದರೆ ಸರಿಯಲ್ಲ. ಸದರಿ ಖಾಲಿ ಜಾಗ ಸರ್ಕಾರಕ್ಕೆ ಸೇರಿದ್ದು ಎಂದರೆ ಸರಿ. ಚಾಸಾ-1 ಮತ್ತು ಚಾಸಾ-4 ರವರು ಬೇರೆ ಬೇರೆ ವಾಸವಾಗಿದ್ದೇವೆ ಎಂದರೆ ಸರಿ. 1 ನೇ ಆರೋಪಿ ಮತ್ತು ನನ್ನ ಮನೆ ಮಧ್ಯೆ ಸುಮಾರು 15 ಅಡಿ ಅಗಲ ರಸ್ತೆ ಇದೆ ಎಂದರೆ ಸರಿ. ನನ್ನ ಮನೆಯಲ್ಲಿ ಒಟ್ಟು 5 ಜನ ವಾಸವಿದ್ದೇವೆ.

ಸದರಿ ಜಾಗದ ವಿಚಾರವಾಗಿ ನಮಗೂ ಹಾಗೂ ಆರೋಪಿತರ ನಡುವೆ ಯಾವುದೇ ಪಂಚಾಯಿತಿ ಆಗಿರುವುದಿಲ್ಲ. 1 ನೇ ಆರೋಪಿ ಚಾಸಾ-1 ರವರಿಗೆ ಹಾರೇಕೋಲಿನಿಂದ ಹೊಡೆದಾಗ ರಾತ್ರಿ 8.30 ಸಮಯ ಆಗಿತ್ತು, ಗಲಾಟೆ ನಡೆದ ಸಮಯದಲ್ಲಿ ಸುಮಾರು 30-40 ಜನ ಇದ್ದರು. 1 ನೇ

ಆರೋಪಿ ನನಗೆ ಕೆನ್ನೆಗೆ, ಭುಜಕ್ಕೆ ಹೊಡೆದನು. 1 ನೇ ಆರೋಪಿ ಚಾಸಾ–1 ರವರ ತಲೆಗೆ ಹಾರೇಕೋಲಿನಿಂದ ಹೊಡೆದಿರುತ್ತಾನೆ. 2 ನೇ ಆರೋಪಿ ನನ್ನ ಕೂದಲು ಹಿಡಿದು ಎಳೆದಾಡಿ, ಕೆನ್ನೆಗೆ ಹೊಡೆದಿರುತ್ತಾನೆ. 3 ನೇ ಆರೋಪಿ ಕೈ ಕಾಲುಗಳಿಂದ ನನ್ನ ಕೆನ್ನೆಗೆ, ಕೈ ಕಾಲುಗಳಿಗೆ ಹೊಡೆದಿರುತ್ತಾನೆ. 4 ನೇ ಆರೋಪಿ ನನಗೆ ಹೊಡೆದಿರುವುದಿಲ್ಲ. 5 ನೇ ನನಗೆ ಹೊಡೆದಿಲ್ಲ, ಚಾಸಾ–1 ರವರಿಗೆ ಹೊಡೆದಿರುತ್ತಾರೆ. 6 ನೇ ಆರೋಪಿ ನನಗೆ ಹೊಡೆದಿರುವುದಿಲ್ಲ. 7 ಮತ್ತು 8 ನೇ ಆರೋಪಿತರು ನನಗೆ ಹೊಡೆದಿರುವುದಿಲ್ಲ ಗಲಾಟೆ ನಡೆದಾಗ ಕತ್ತಲೆ ಇದುದರಿಂದ ಯಾವ ಯಾವ ಆರೋಪಿತರು ಯಾವ ಯಾವ ಭಾಗಕ್ಕೆ ಹೊಡೆದರು ಎಂದು ಸರಿಯಾಗಿ ಗೊತ್ತಾಗಲಿಲ್ಲ ಎಂದರೆ ಸರಿ. ನಾನು, ಚಾಸಾ–1 ಹಾಗೂ ಚಾಸಾ–3 ರಿಂದ 8 ರವರು ಆರೋಪಿತರ ಮೇಲೆ ಪದೇ ಪದೇ ಜಗಳ ಮಾಡುತ್ತಿದ್ದೆವು ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ರೈತರ ಮನೆಗಳಲ್ಲಿ ಹಾರೆಕೋಲು ಇರುತ್ತದೆ ಎಂದರೆ ಸರಿ. ಆರೋಪಿತರು ನಮಗೆ ಬೈದಿಲ್ಲ, ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು 1 ನೇ ಆರೋಪಿ ಹಾರೇಕೋಲಿನಿಂದ ಚಾಸಾ–1 ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ 1 ನೇ ಆರೋಪಿ ಸೀರೆ ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಮು.ಮಾ–1 ಮತ್ತು 2 ನ್ನು ನೀಡಿದ ದಿನಾಂಕ ನೆನಪಿಲ್ಲ. ಮು.ಮಾ–1 ಮತ್ತು 2 ನ್ನು ಪೋಲಿಸ್ ಠಾಣೆಗೆ ನೀಡಲು ಒಟ್ಟು 5 ಜನ ಹೋಗಿರುತ್ತೇವೆ. ನಾನು ನ್ಯಾಯಾಲಯದಲ್ಲಿ ನಿಪಿ–3 ರಂತೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಮು.ಮಾ–1 ಮತ್ತು 2 ನನ್ನದಲ್ಲ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಗೆ ಹೋಗಿ ಮು.ಮಾ–1 ಮತ್ತು 2 ನ್ನು ನೀಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಮನೆಯ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ, ನಾನು ಮತ್ತು ಚಾಸಾ–1 ಹಾಗೂ ಚಾಸಾ–3 ರಿಂದ 8 ರವರೊಂದಿಗೆ ಸೇರಿ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ನಾನು, ಚಾಸಾ–2 ರಿಂದ 8 ರವರು ಸಂಬಂಧಿಕರಾಗಿದ್ದು, ಆರೋಪಿತರ ವಿರುದ್ಧ ಪಿತೂರಿ ಮಾಡಿ, ಸುಳ್ಳು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.